Regd No B G. 155

Sri

30—9—1964

48 th Year
ನೇ ವರ್ಷ್
★
Sri 'Satyavadi'
— DAILY —
MYSORE 4

ಸತ್ಯವಾದಿ

ಸ್ಥಾಪಕರು— ಅಂಮನೆ ಸಿಂಸ್ಕೆದಾರ್ ಎಂ ವಿ ಸುಬ್ಬಂತಾಯರು [2 ನಸ್ಪೆ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
ಸತ್ಯವಾದಿ ಪತ್ರಿಕೆಯನ್ನು ತಪ್ಪದೇ ಓದಿ
ದಿನ ಪತ್ರಿಕೆ ತಿಂಗಳಿಗೆ 40 ನ ಪೈ

Protect the Cow"
ಗೋಸಂರಕ್ಷಣೆ ಮಾಡಿ

ಪೂರ್ಣ ಗುಣವಾಗದಿದ್ದಲ್ಲಿ ಹಣ ವಾಪಸ್

ಕೇವಲ 15 ದಿನಗಳಲ್ಲಿ ಪುರುಷರ ನಿಶ್ಯಕ್ತಿಗೆ ಖಾತ್ರಿಯಾದ ಯುನಾನಿ ಔಷಧಿಯೇ ಮುಪ್ಪಾದಂತೆ ಭಾವಸಮವರು ಮತ್ತು ಸಂಸಾರದಲ್ಲಿ ಜಿಗುಪ್ಸೆ ಹೊಂದಿದವರು ಇಂದೇ ಡಾ || ಮೋತಿಯವರ ಸಲಹೆ ಪಡೆಯಿರಿ.

ಇವರು ನಂಗಳ ದೌರ್ಬಲ್ಯ, ಅತಿ ಮೂತ್ರ, ಸ್ವಪ್ನಾವಸ್ಥೆ, ಸ್ತ್ರೀಯರ ಋತುಸಾಧ್ಯವದ ತೊಂದರೆ ಮತ್ತು ಇದೇ ರೀತಿಯ ಸಕಲ ಗುಪ್ತ ರೋಗಗಳನ್ನೂ ಗುಣಪಡಿಸುವರು.

ಜನತಾ ಡಿಸ್ಪೆನ್ಸರಿ
ಪಾಲಿಹೆ ಕಾಲ { ಬೆಳಿಗ್ಗೆ 10 ರಿಂದ 1
ಪ್ರತಿದಿನವೂ { ಸಂಜೆ 4 ರಿಂದ 8
ಹೆಡ್ ಆಫೀಸ್ :
ಸುಬೇದಾರ್ ಚತ್ರಂ ರೋಡ್
ಬೆಂಗಳೂರು 9 ಫೋಕ ನಂಬ್ರ 75332

ಸಭಾಪರಿತ್ಯಾಗ

ಕಲ್ಕತ್ತಾ— ಭಾರತ ಬಂದ್ ಸಂದರ್ಭದಲ್ಲಿ ಕೆಲವು ಮಂದಿ ಶಾಸನಸಭಾ ಸದಸ್ಯರಿಗೆ ಕಿರುಕುಳಕೊಟ್ಟ ವಿಷಯ ಬಗ್ಗೆ ಶಾಸನಸಭೆಯಲ್ಲಿ ಉತ್ತರ ಕೊಡುವುದಕ್ಕೆ ಮುಖ್ಯಮಂತ್ರಿಗಳ ಹಾಜರಿಗಾಗಿ ಮಾಡಿದ ಪ್ರಯತ್ನ ವಿಫಲವಾಗಲು, ವಿರೋಧ ಪಕ್ಷದವರೆಲ್ಲಾ ಸಭಾಪರಿತ್ಯಾಗ ಮಾಡಿದರು.

ನಾಳೆಯ ಪಂಚಾಂಗ

ದೈವಜ್ಞ ಶಿಖಾಮಣಿ
ಆಸ್ಥಾನ ಮಹಾವಿದ್ವಾನ್ ಧರ್ಮಾಧಿಕಾರಿ
ರಾಜಕಾರ್ಯಾಸಕ್ತ. ಜ್ಯೋತಿರ್ವಿದ್ವನ್ಮಣಿ
ಕಂದಶ್ಯಾಮಕೃಷ್ಣ ಜೋಯಿಸರಿಂದ
ಶ್ರೀ ಗುರುವಾರ ವಿಕಾದಶಿ ಪುಷ್ಯ

ಆಫ್ರಿಕನ್ನರ ಹಬ್ಬದ ಸ್ವಾರಸ್ಯಗಳು

ಜೊಹಾನ್ಸ್‌ಬರ್ಗ್— ಜಾನ್ ಹಬ್ಬದ ಸಮಾರಂಭಗಳಲ್ಲಿ 6 ಪುರುಷರು ಖುನಿ, 4 ಸ್ತ್ರೀಯರು ಮೇಲೆ ಅತ್ಯಾಚಾರ, 30 ಜನರಿಗೆ ಚೂರಿ ಇರಿತ ಸಂಭವಿಸಿದೆ : ಇವರೆಲ್ಲರೂ ಆಫ್ರಿಕನ್ನರು : ಸಮಾರಂಭದಲ್ಲಿ 35000 ಮಂದಿ ಭಾಗವಹಿಸಿದ್ದರು : ಜೊಹಾನ್ಸ್‌ಬರ್ಗಿನ 78 ನೇ ವರ್ಷದ ಈ ಸಮಾರಂಭದಲ್ಲಿ ಕೆಲವರು ಆಫ್ರಿಕ್ ಮಹಿಳೆಯರು ಎದೆ ಕಾಣುವ ಉಡುಪು ಧರಿಸಿದ್ದರು.

❋

ಸತ್ಕಾರ್ಯ

ಕ್ಯಾಲಿಫೋರ್ನಿಯಾ— ವಿಶ್ವದಲ್ಲಿ ಅತ್ಯಂತ ವಿಶ್ವಾಸದ ಖೈದಿಗಳ ಬಿಡುಗಡೆ ಅಥವಾ ವಿಚಾರಣೆಗೆ ವರ್ಷಾಡಿಸುವ ಕಾರ್ಯಾದ 51 ದೇಶಗಳ ಮತ್ತು 3000 ಸದಸ್ಯರ ಸಂಸ್ಥೆಯು 'ವರ್ಷದ ಖೈದಿ' ಪೋರ್ಚುಗೀಸ್ ಡಾಕ್ಟರ್ ಜೂಲಿಯಟ್ ಗಾಂಧ್ಯ ಎಂದು ಸಾರಿದೆ ; ಈಕೆಯು ಪೋರ್ಚುಗೀಸಂ ಬಂಧನದಲ್ಲಿ 2 ವರ್ಷದಿಂದ ಇದಾಳೆ

★

ಶಸ್ತಾಗಿರಿ

ಕಲ್ಕತ್ತಾ— ಹೌರಾ ರೈಲ್ವೇ ಸ್ಟೇಷನ್ ಯಾರ್ಡಿನಲ್ಲಿ ಬಂಪು ಧಾನ್ಯ ಮಾರ್ಕೆಟ್ಟೇ ಮೇಲೆ ಪೋಲೀಸರು ಧಾಳೀ ನಡೆಸಿ 40 ಜನರನ್ನು ದಸ್ತಗಿರಿ ಮಾಡಿದರು : ಈ ಸಂದರ್ಭದಲ್ಲಿ 30 ಕಡೆ ಧಾಳಿ ನಡೆಸಿ ಅನೇಕ ಕಾಗದಪತ್ರಗಳನ್ನು ವಶಪಡಿಸಿಕೊಂಡರು.

—

ಭುವನೇಶ್ವರ— ಮೊನ್ನೆಯೂ ಕಟಕ್ಕಿನಲ್ಲಿ ಗಲಭೆಯಾಗ್ಬಹೋ ಲೀ ಸರಿಲಾಠಿ ಚಾರ್ಜ್ ಮಾಡಿದರು

—

ಸತ್ನ (ಮಧ್ಯಪ್ರದೇಶ)— ಪನ್ನಾ ವರ್ಜಗಣಿಯಲ್ಲಿ ಮತ್ತೊಂದು 17,81 ಕ್ಯಾರೆಟು ವಜ್ರ ಸಿಕ್ಕಿದೆ.

ಸಾಹಸಿಗೆ ಒದಗಿದ ದುರದೃಷ್ಟ

ಅಹಮದಾಬಾದು— ಕಳೆದ ವಾರ ಭಾವನಗರ ಜಿಲ್ಲೆಯಲ್ಲಾದ ಭೀಕರ ನೆರೆ ಹಾವಳಿಯಲ್ಲಿ, ರತಲಿ ಗ್ರಾಮದ ಸೂಬೆ ಎಂಬುವನು ತುಂಬಿದ ಪ್ರವಾಹದ ಕಲಬಾರು ನದಿಯಲ್ಲಿ ಅನೇಕ ಸಾರಿ ಮುಳುಗಿ ಕೊಚ್ಚಿಹೋಗುತ್ತಿದ್ದವರಲ್ಲಿ 30 ಗಂಡಸರು ಮತ್ತು 2 ಮಕ್ಕಳನ್ನು ತಂದು ಬದುಕಿಸಿದನು ; ಇನ್ನೂ ಕೆಲವರನ್ನು ರಕ್ಷಿಸಲು ಹೋದಾಗ ಅವನೇ ಕೊಚ್ಚಿಹೋದನು — ಈತನ ಪತ್ನಿಗೆ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ರೂ 1001 ಕೊಡಲು ಮುಖ್ಯಮಂತ್ರಿ ಶ್ರೀ ವೇಘಾ ಘೋಷಿಸಿದರು — ಮಿಕ್ಕ ಸಹಾಯ ಇತ್ಯಾದಿ ಸರ್ಕಾರ ಪರ್ಯಾಲೋಚಿಸುವುದೆಂದರು.

★

ನವದೆಹಲಿ — ಕಾಶ್ಮೀರದ ಮಾಜಿ ಪ್ರಧಾನಿ ಭಕ್ಷಿಯವರ ವಿಚಾರಣೆಗೆ ಒಂದು ನ್ಯಾಯಮಂಡಲಿಯನ್ನು ವರ್ಷಾಡಿಸಬಹುದೆಂದು ಪ್ರಧಾನಿ ಶಾಸ್ತ್ರಿಗಳು ಅಭಿಪ್ರಾಯ ವ್ಯಕ್ತಪಡಿಸಿದರು — ಕಾಶ್ಮೀರದ ಪ್ರಸ್ತುತ ಪರಿಸ್ಥಿತಿಯ ಬಗ್ಗೆ ಪಾರ್ಲಿಮೆಂಟಿನಲ್ಲಿ ಚರ್ಚೆ ನಡೆಸಬೇಕೆಂದು ಪಾರ್ಲಿಮೆಂಟಿನ 31 ಸದಸ್ಯರು ಪ್ರಧಾನಿ ಶಾಸ್ತ್ರಿಗಳಿಗೆ ಬರೆದಿದ್ದಾರೆ.

★

ಅಲಪ್ಪೆ— ಕೇರಳದ ಮುಖ್ಯಮಂತ್ರಿ ಶ್ರೀ ಶಂಕರರು ತಮ್ಮ ವೀರಿನ ಅಪಾದನೆಯ ವಿಚಾರಣೆಗೆ ಒಂದು ಷರತ್ತು ಹಾಕಿರುವರು : ಅಪಾದನೆಗಳು ಸುಳ್ಳೆಂದು ನಿರ್ಧಾರವಾದರೆ ಆಪಾದಿತರ ಮೇಲೆ ಕಾರ್ಯಕ್ರಮ ತೆಗೆದುಕೊಳ್ಳಬೇಕೆಂಬುದೇ ಈ ಷರತ್ತು.

★

ನವದೆಹಲಿ— 63-64 ರಲ್ಲಿ ಸುಮಾರು 15 ಲಕ್ಷ ಟೆಲಿಗ್ರಾಂಗಳು ಅಂಜೇ ಮೂಲಕ ರವಾನಿಸಲ್ಪಟ್ಟವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು

ವಾರ್ತಾ ವಿಶೇಷಗಳು

ನವದೆಹಲಿ— ಮಧ್ಯಪ್ರದೇಶದ ಪಿಪರಿಯ ರೈಲ್ವೇ ಸ್ಟೇಷನ್ನಿನಲ್ಲಿ ಹಣ್ಣಿನ ವಾರ್ಸಲ್ಲಿನಲ್ಲಿ ಲಡಕ್ ಮತ್ತು ನೇಫಾ ನಕ್ಸೆ ಸಿಕ್ಕಿತಾದರೂ ಅದರಲ್ಲಿ ರಕ್ಷಣಾ ಅಥವಾ ಮಿಲಿಟರಿ ವಿಷಯಮುಖ್ಯತೆ ಏನೂ ಇಲ್ಲವೆಂದು ಲೋಕಸಭೆಯಲ್ಲಿ ತಿಳಿಸಲಾಯಿತು.

★

ನವದೆಹಲಿ— ಭಾರತ ಸರ್ಕಾರವು ಅಕ್ಟೋಬರು 15 ರಿಂದ, ಜನಪ್ರಿಯ ಒಟ್ಟಿಗಳ ಮೇಲೆ ಹತೋಟಿ ಜಾರಿ ಮಾಡಲು ನಿರ್ಧರಿಸಿದ್ದಾರೆ — ಹತೋಟಿಗೆ ಧೋತಿ, ಸೀರೆ, ಲಂಗಾಲ್ಟಾರು, ಷರ್ಟಿಂಗೂ ಸೇರಿವೆ

★

ನವದೆಹಲಿ— 38 ನೆ ಅಂತರರಾಷ್ಟ್ರೀಯ ಕ್ರಿಶ್ಚಿಯನ್ ಕಾಂಗ್ರೆಸ್ಸು ನವೆಂಬರು 28 ರಿಂದ ಡಿಸೆಂಬರು 6 ರವರಿಗೆ ಬೊಂಬಾಯಿನಲ್ಲಿ ಸೇರುವುದು ; ಇದಕ್ಕೆ ಹೊರಗಿನಿಂದ 15 ರಾಷ್ಟ್ರ, ಭಾರತದಿಂದ 1 ಲಕ್ಷ ಪ್ರತಿನಿಧಿಗಳು ಬರುವರು.

ಮೈಸೂರಿಗೆ ಅಕ್ಕಿ ಬರುವುದು

ಶ್ರೀ ಅಬ್ದುಲ್ ಗಫಾರ್ ಖಾನರ ಅಧ್ಯಕ್ಷತೆಯಲ್ಲಿ ನಿನ್ನೆ ಸಂಜೆ ಮೈಸೂರು ಪೌರಸಭೆಯ ಸಾಧಾರಣ ಸಭೆ ನಡೆಯಿತು

ಶ್ರೀ ತರಾ ಸುಬ್ಬಂತಾಯರು ಸರ್ಕಾರದ ಆಹಾರ ಧಾನ್ಯ ನೀತಿ ಟೀಕಿಸಿದರು. ಪುರಸಭಾ ಸದಸ್ಯರ ಬಂಧನ ಹಾಗೂ 144 ನೇ ವಿಧಿ ಪ್ರತಿಭಟಿಸಲು ಸಭೆ ಮುಂದಕ್ಕೆ ಹೋಗಬೇಕೆಂದು ಅವರು ನಿಲುವಳಿ ತಂದರು ಅನುಮೋದಕರಿಲ್ಲದೆ ಅದು ಬಿದ್ದುಹೋಯಿತು

ಶ್ರೀ ಹೆಚ್. ಕೆಂಪೇಗೌಡರು ಮಾತನಾಡಿ ಬಂದ್ ಜಳುವಳಿಯಿಂದ ಗೂಂಡಕೃತ್ಯ ನಡೆಯಿತೆಂದು ಆಹಾರ ದಾಸ್ತಾನುಗಾರರ ಬೆಂಬಲ ಅವರಿಗಿತ್ತೆಂದೂ ಮುಂದಿನ ಮಾಹೆ 2 ರೊಳಗೆ ಆಹಾರ ಧಾನ್ಯ ಒದಗುವುದೆಂದೂ ನುಡಿದರು.

ವಿವಿಧ ವಿಷಯಗಳು

ನೇತ್ರದಾನಿ ಪದ್ಮಶ್ರೀ ಡಾ|| ಮೋದಿಯವರು ಕೊಡಗಿನ ಪೊನ್ನಂಪೇಟೆಯಲ್ಲಿ 6-10-64 ರಂದು ಉಚಿತ ನೇತ್ರ ಶಸ್ತ್ರಚಿಕಿತ್ಸಾ ಶಿಬಿರ ನಡೆಸುವರು.

ನವದೆಹಲಿ— ನ್ಯೂಯಾರ್ಕ್ ವಿಶ್ವಮೇಳದಲ್ಲಿರುವ ಭಾರತದ ಪ್ರದರ್ಶನಾ ಮಂಟಪಕ್ಕೆ ಇಲ್ಲಿಯವರೆಗೆ ಸುಮಾರು 23 ಲಕ್ಷ ಜನರು ಭಾರತದ ಪ್ರದರ್ಶನಾ ಮಂಟಪವನ್ನು ಸಂದರ್ಶಿಸಿದ್ದಾರೆ

ಮದರಾಸು ರಾಜ್ಯದ ಉತ್ತರ ಆರ್ಕಾಟು ಜಿಲ್ಲೆಯಲ್ಲಿ ತಾಳತ್ತಪ್ಪಮಲೈ ಎಂಬ ಹೆಸರಿನ ಬೆಟ್ಟಗಳಿವೆ : ಆ ಬೆಟ್ಟಗಳಲ್ಲಿ ಶಿಲಾಯುಗದ ವಸಾಹತುಗಳು ಕೆಲವು ಪತ್ತೆಯಾಗಿದೆ

ನವದೆಹಲಿ— ಇಲ್ಲಿ ಜನವರಿ 8 ರಿಂದ 21 ರವರೆಗೆ ನಡೆಯುವ ಮೂರನೆಯ ಅಂತರಾಷ್ಟ್ರೀಯ ಚಲಚಿತ್ರೋತ್ಸವದಲ್ಲಿ ಸ್ಪರ್ಧೆಗೆಂದು ಭಾಗವಹಿಸದೇ ಇರುವಂತಹ ಸುಸ್ಪಸಿದ್ಧ ವಿದೇಶೀ ಹಾಗೂ ಭಾರತೀಯ ಚಿತ್ರಗಳನ್ನು ಸಹ ಪ್ರದರ್ಶಿಸಲಾಗುವುದು.

ಸತ್ಕಾರ ಕೂಟ

ಮೈಸೂರು ಪೌರಸಭಾಧ್ಯಕ್ಷ ಶ್ರೀ ಅಬ್ದುಲ್ ಗಫಾರ್‌ಖಾನ್‌ರವರು ಅಖಿಲ ಭಾರತ ಮೂರನೇ ಶರಗತಿ ಅಂಚೇನೌಕರರ ಸಂಘದ ಕೇಂದ್ರ ಕಾರ್ಯಕಾರಿ ಸಮಿತಿ ಸದಸ್ಯರಿಗೆ ಗೌರವಾರ್ಥ ನಿನ್ನೆ ಬೆಳಿಗ್ಗೆ ಸತ್ಕಾರವೇರ್ಪಡಿಸಿದ್ದರು.

ಸಿಟಿ ಕೊಆಪರೇಟಿವ್ ಬ್ಯಾಂಕ್

ಈ ಸಾಲಿಗೆ ಬ್ಯಾಂಕಿನ ಡೈರೆಕ್ಟರುಗಳಾಗಿ ಜಯಾಯಿ ಸಲ್ಪಟ್ಟಿರುವವರು— ಶ್ರೀಗಳಾದ ಬಿ ಜಿ ದಾಸ್, ಎಂ ಸಿ ಕೃಷ್ಣಸ್ವಾಮಿ, ಈರಪ್ಪ ಉರುಫ್ ಚೌಡಯ್ಯ, ಎ ವಿ ರಂಗರಾವ್, ಎ ಕೃಷ್ಣಮೂರ್ತಿರಾವ್, ಜಿ ಜನಾರ್ದನನಾಯ್ಡು, ಹೆಚ್ ರಾಮಣ್ಣ, ಹೆಚ್ ಕೃಷ್ಣಮೂರ್ತಿರಾವ್, ಎಂ ಎ ಸಂಪತ್ತೈಯಂಗಾರ್, ಎಂ ಎಸ್ ಕೃಷ್ಣಾಜಿರಾವ್, ಎಂ ಆರ್ ಸಿ ಬಸಪ್ಪ, ಎಂ ಕೆ ರಾಮಕೃಷ್ಣಪ್ಪ, ಎಚ್ ಜೆ ಕರಿಯಪ್ಪ, ಎಸ್ ಪುಟ್ಟಣ್ಣಯ್ಯ, ಜಿ ಆರ್ ಜಗನ್ನಾಥೇಶವಯ್ಯ.

ದಿವ್ಯವಾಣಿ

ಮನುಷ್ಯನ ಆಹಾರವು ಆತನು ಹುಟ್ಟಿದಂದಿನಿಂದಲೇ ಉತ್ಪನ್ನವಾಗುತ್ತದೆ, ತುಪ್ಪ ಮತ್ತು ಹಾಲಿನಿಂದ ಚಿಮುಕಿಸಲ್ಪಟ್ಟಂತೆ ಕಾಣಿಸಿಕೊಳ್ಳುವ ಮಂದು ಮಗುತ್ವವನ್ನು ಹೊಂದಿರುತ್ತಾನೆ.

ಕೇಳುವುದು ಒಂದು, ಕೊಡುವುದು ಇನ್ನೊಂದು.

ತ್ಯಾಗಕ್ಕೆ ಸಮಾನವಾದಂತಹ ಸುಖವು ಅನ್ಯಥಾ ಇರದು.

ಕೇಳುವವನು ಇಲ್ಲದಿದ್ದರೆ, ಹೇಳುವವರು ಏನು ಮಾಡಿಯಾರು ?



ಗೋರಕ್ಷಣೆ ಪ್ರಾಣದಯೆಯ ಕಾರ್ಯಗಳು ಹೆಚ್ಚೆಚ್ಚಾಗಿ ಪಡೆಯಲಿ

ವೃಡ್‌ಲಾಂಡ್ ಯಶಸ್ವಿ 3 ನೇ ವಾರ

.... ಎ. ವಿ ಎಂ. ರವರ ಅಶ್ವಮೋಘ ಹಿಂದಿ ಚಿತ್ರ ....

ಪೂಜಾ ಕೆ ಫೂಲ್

ತಾರಾಗಣ— ಅಶೋಕಕುಮಾರ್, ವೈಜಯಂತಿಮಾಲಾ, ನಿಮ್ಮಿ, ಧರ್ಮೇಂದ್ರ ಸಾಕ್ಷಿ

[ದಿನವಹಿ 3 ಪ್ರದರ್ಶನಗಳು]

ಆಪೆರಾ— ಜನಭರಿತ 2 ನೇ ವಾರ

ಅಶ್ವಮೋಘ ಕನ್ನಡ ಚಿತ್ರ [ದಿನ 3 ಆಟಗಳು]

ಪೋಸ್ಟ್ ಮಾಸ್ಟರ್

ಲೆ ಯ

ಪಾತ್ರ— ಮಂದಣ್ಣ, ಪಾಪಮ್ಮ, ಈಶ್ವರಪ್ಪ, ಶಿವರಾಜ್, ಶಿವಶಂಕರ್, ಬಾಲಕೃಷ್ಣ

SHAKTI SUDHA

Superb Tonic

Help The ' Gorakshana'

" ಗೋರಕ್ಷಣ " ಕ್ಕೆ ಬೆಂಬಲಿಗರಾಗಿರಿ

ಕನ್ನಡನಾಡಿನಲ್ಲಿ ಗೋರಕ್ಷಣೆಗೆ ಪ್ರಾಣದಯೆಗೆ, ಶಾಕಾಹಾರಕ್ಕೆ ಪಶುವೈದ್ಯ ವಿಚಾರಗಳಿಂದ ಕೂಡಿದ ಏಕೈಕ ಮಾಸಪತ್ರಿಕೆ

' ಗೋರಕ್ಷಣ ' ಕ್ಕೆ ಸಹಾಯದ್ರವ್ಯವನ್ನೂ ಲೇಖನಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಾರ್ಷಿಕ ಚಂದಾ 50 ನ ಪೈ

ಅಭಿವಾನಿಗಳು ರೂ 10 (ಒಂದೇ ಸಾರಿ) ಸಹಾಯಕರು ರೂ 25 (ಒಂದೇ ಸಾರಿ)

ವಿಳಾಸ— ಗೋರಕ್ಷಣ ಆಫೀಸು ಚಾಮರಾಜಪುರಂ, ಮೈಸೂರು 4

ಗೋರಕ್ಷಣಕ್ಕೆ ಚಂದಾ ಸಹಾಯದ್ರವ್ಯ ಮುಂತಾದ್ದನ್ನು ಸ್ವೀಕರಿಸುವವರು—

ಡಾ|| ಪಿ ಎಸ್ ನಾರಾಯಣ್, ಶ್ರೀ ಪಿ ಎಸ್ ವಿಶ್ವನಾಥ್, ಜಯನಗರ, ಬೆಂಗಳೂರು

ಶ್ರೀ ಬಿ ಜಿ ಶಾಸ್ತ್ರಿಗಳು (ದ ರೈಲ್ವೆ) ವಿದ್ಯಾರಣ್ಯಪುರಂ, ಮೈಸೂರು

ಶ್ರೀ ಅನಂತನಂಪಿಂಡಯ್ಯಂಗಾರ್, ಶಾಸ್ತ್ರಧರ್ಮ ಪ್ರಚಾರಸಭಾ, ಹೊಂಗನೂರು

ಗೋರಕ್ಷಣ ಆಫೀಸು, ಸತ್ಯವಾದಿ ಪ್ರೆಸ್, ಚಾಮರಾಜಪುರಂ, ಮೈಸೂರು 4 |

Edited, Printed & Published by the Proprietor Dharma Prachara Nirata M. S. Krishna Rao at the Satyavadi Press, Chamarajapuram, Mysore 4.